

# ದಾಸೋಹ

ಶ್ರೀ ಗವಿಮಠ ಅಕ್ಷರ ದಾಸೋಹ, ಆರೋಗ್ಯ ದಾಸೋಹ ಅರಿವಿನ ದಾಸೋಹ, ಅನ್ನ ದಾಸೋಹಗಳ ಸಂಗಮ ಸಾವಿ ಸಾವಿರ ಬಡ ಮಕ್ಕಳಿಗೆ ಉಚಿತ ಪ್ರಸಾದ ನಿಲಯ, ನಿತ್ಯವೂ ಬರುವ ಭಕ್ತರಿಗೆ ನಿತ್ಯದಾಸೋಹದ ಜೋತೆಗೆ ಜಾತ್ರೆಯಲ್ಲಿ 15 ದಿನ ಲಕ್ಷಾಂತರ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಮಠದ ಜಾತ್ರಾ ಮಹೋತ್ಸವದ ಮಹಾದಾಸೋಹದಲ್ಲಿ ನಿರಂತರವಾಗಿ ಒಂದು ತಿಂಗಳು ಪ್ರಸಾದ ಜರುಗುವುದು ಪ್ರಸಾದ ನಿಲಯದ ವಿಸ್ತೀರ್ಣ ಸುಮಾರು ನಾಲ್ಕು ಎಕರೆ ( 2ಲಕ್ಷ ಚದುರ ಅಡಿ) ಯಷ್ಟು ಇದ್ದು ಅದರಲ್ಲಿ ಭವ್ಯವಾದ ಅಡುಗೆಮನೆ ಆಹಾರ ಸಂಗ್ರಹಣೆ ಕೊಠಡಿ ತರಕಾರಿ ಸಂಗ್ರಹಣೆ ಕೊಠಡಿ ಹಾಗೂ ಪ್ರಸಾದ ಸ್ವೀಕರಿಸಲು ವಿಶಾಲವಾದ ಸ್ಥಳಾವಕಾಶವಿದೆ. ಭಕ್ತರು ಪ್ರಸಾದ ಸೇವನೆಗೆ ಸಾಲಾಗಿ  ಬರಲು ಅಚ್ಚುಕಟ್ಟಾದ ಸಾಲುಗಳನ್ನು ನಿರ್ಮಿಸಲಾಗಿದೆ. ಶಾಂತ ರೀತಿಯಂದ ಪ್ರಸಾದ ನಿಲಯಕ್ಕೆ ಬಂದು ಪ್ರಸಾದ ಸ್ವೀಕರಿಸಲು ಅವಕಾಶ ಮಾಡಿಕೊಡಲಾಗಿದೆ.

ಜಾತ್ರಾಮಹೋತ್ಸವ ಸಂದರ್ಭದಲ್ಲಿ ಒಂದು ದಿನಕ್ಕೆ ಪ್ರಸಾದ ತಯಾರಿಸುವವರು 300 ರಿಂದ 400ರ ವರೆಗೆ ಭಕ್ತರು ಸೇವೆಗೈದರೆ, ಪ್ರಸಾದ ವಿತರಣೆಯಲ್ಲಿ 500 ರಿಂದ 600 ಭಕ್ತರು ಪಾಲ್ಗೊಳ್ಳುವರು. ಜಾತ್ರಾಮಹೋತ್ಸವ ಪ್ರಾರಂಭದಿಂದ ಮುಕ್ತಾಯದ ವರೆಗೆ ಪ್ರಸಾದ ನಿಲಯದಲ್ಲಿ ಸುಮಾರು 25ಸಾವಿರ ಭಕ್ತರು ವಿವಿಧ ಸೇವೆಯಲ್ಲಿ ಪಾಲ್ಗೊಳ್ಳುವರು. ಜಾತ್ರೆಯ ಪ್ರಾರಂಭದಿಂದ ಮುಕ್ತಾಯದವರೆಗೆ ಸುಮಾರು 10 ಲಕ್ಷ ಭಕ್ತರು ಪ್ರಸಾದ ಸ್ವೀಕರಿಸುತ್ತಾರೆ.

ಪ್ರಸಾದ ನಿಲಯದಲ್ಲಿ ಪ್ರಾರಂಭದಿಂದ ಮುಕ್ತಾಯದವರೆಗೆ ಖರ್ಚಾಗುವ ಸಾಮಾಗ್ರಿಗಳ ವಿವರಣೆ ಈ ಕೆಳಗಿನಂತಿದೆ.

1. ರೊಟ್ಟಿ ಸುಮಾರು 13 ರಿಂದ 15 ಲಕ್ಷ
2. ಅಕ್ಕಿ 600ಕ್ವಿಂಟಾಲ್
3. ಸಿಹಿ ಪದಾರ್ಥಗಳು 700ಕ್ವಿಂಟಾಲ್
4. ತರಕಾರಿ 200ಕ್ವಿಂಟಾಲ್
5. ದ್ವಿದಳ ಧಾನ್ಯಗಳು 250ಕ್ವಿಂಟಾಲ್
6. ಹಾಲು 10 ಸಾವಿರ ಲೀಟರ್
7. ತುಪ್ಪ ಸಾವಿರ ಲೀಟರ್
8. ಉಪ್ಪಿನಕಾಯಿ 5000 ಕೆ.ಜಿ,
9. ಪುಠಾಣಿ ಚಟ್ನಿ 15ಕ್ವಿಂಟಾಲ್.

ಈ ಪ್ರಸಾದವನ್ನು ಸಿದ್ಧಗೊಳಿಸಲು ಸುಮಾರು 100 ಗಾಡಿ ಕಟ್ಟಿಗೆ ( 500 ಟನ್) ಬಳಸಲಾಗುತ್ತದೆ

ಇದೆಲ್ಲಾ ಭಕ್ತರ ಭಕ್ತಿ ಶ್ರದ್ಧೆ ಹಾಗೂ ಸ್ವಯಂ ಪ್ರೇರಣೆಗಳಿಂದ ನಡೆಯುತ್ತಿರುವದು ಗವಿಮಠದ ಜಾತ್ರೆಯ ವೈಶಿಷ್ಟ್ಯತೆ.